ಮಾರ್ಗದರ್ಶನದಲ್ಲಿ, ಅವರ ಸೂಚನೆ ಮೇರೆಗೆ 45 ತಾಲ್ಲೂಕುಗಳಲ್ಲಿ ಕಾರ್ಮಿಕ ನಿರೀಕ್ಷಕರ ಹುದ್ದೆಗಳನ್ನು ಸೃಷ್ಟಿ ಮಾಡಿ ಭರ್ತಿ ಮಾಡುವ ಕೆಲಸವನ್ನು ಮಾಡಿದ್ದೇವೆ. ಹಂತ ಹಂತವಾಗಿ ಉಳಿದ ತಾಲ್ಲೂಕುಗಳಲ್ಲಿ ಕೂಡ ಕಾರ್ಮಿಕ ನಿರೀಕ್ಷಕರ ಹುದ್ದೆ ಗಳನ್ನು ಸೃಷ್ಟಿ ಮಾಡಿದ್ದೇವೆ. 21 ತಾಲ್ಲೂಕುಗಳಲ್ಲಿ ಭರ್ತಿ ಮಾಡಿದ್ದೇವೆ. ಉಳಿದ ತಾಲ್ಲೂಕುಗಳಲ್ಲಿ ಭರ್ತಿ ಮಾಡಿ ಎಲ್ಲೆಲ್ಲಿ ಕಾಮಗಾರಿ ನಡೆಯುತ್ತಿದೆ, ಆ ಸ್ಥಳಕ್ಕೆ ನಮ್ಮ ಅಧಿಕಾರಿಗಳು ಭೇಟಿ ನೀಡಿ ಅಲ್ಲಿನ ಕಾರ್ಮಿಕರ ಭದ್ರತೆ, ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳತ್ತಾರೆಂಬ ಮಾತನ್ನು ತಮ್ಮ ಮೂಲಕ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ವಿಜಯನಗರ ಕಾಲುವೆಯ ಆಧುನೀಕರಣ

153(1362); ಶ್ರೀ ಆನಂದ ಸಿಂಗ್ (ವಿಜಯನಗರ–ಬಳ್ಳಾರಿ)

ಅ) ಹೊಸಪೇಟೆ ತಾಲ್ಲೂಕಿನ ವಿಜಯನಗರ ಮತಕ್ಷೇತ್ರ ವ್ಯಾಪ್ತಿಯ ತುಂಗ ಭದ್ರಾ ಆಣೆಕಟ್ಟಿನ ವಿಜಯನಗರ ಕಾಲುವೆಯು ಸಂಪೂರ್ಣವಾಗಿ ಹಾಳಾಗಿದ್ದು, ರೈತರ ಹೊಲಗಳಿಗೆ ಸರಿಯಾಗಿ ನೀರು ಹರಿಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು);

ಆ) ಹಾಗಿದ್ದಲ್ಲಿ, ಸದರಿ ಕಾಲುವೆಗಳನ್ನು ಆಧುನೀಕರಣ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಹಾಗಿದ್ದಲ್ಲಿ, ಸದರಿ ಕಾಮಗಾರಿಗಳನ್ನು ಯಾವಾಗ ಅನುಷ್ಠಾನ ಮಾಡಲಾಗುವುದು ಹಾಗೂ ಎಷ್ಟು ಅನುದಾನ ಒದಗಿಸಲಾಗುವುದು; (ಸಂಪೂರ್ಣ ವಿವರ ನೀಡುವುದು)?

ಶ್ರೀ ಎಂ.ಬಿ.ಪಾಟೀಲ್ (ಮಾನ್ಯ ಜಲಸಂಪನ್ಮೂಲ ಸಚಿವರು)

ಅ) ತುಂಗಭದ್ರಾ ಯೋಜನೆಯ ಅಡಿಯಲ್ಲಿ ಬರುವ ವಿಜಯನಗರ ಕಾಲುವೆಗಳು ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ್ನೊಳಗೊಂಡಿದ್ದು, ಇವುಗಳನ್ನು ಸುಮಾರು 400 ವರ್ಷಗಳ ಹಿಂದೆ ವಿಜಯನಗರ ಅರಸನ ಆಳ್ವಿಕೆ ಕಾಲದಲ್ಲಿ ನಿರ್ಮಿಸಲಾಗಿರುತ್ತದೆ. ಒಟ್ಟು 19 ಕಾಲುವೆ

ಗಳು ಇದ್ದು, 18 ಕಾಲುವೆಗಳು ಕರ್ನಾಟಕದಲ್ಲಿದ್ದು, ಈ ಪೈಕಿ ಎರಡು ಕಾಲುವೆಗಳು ಮುಚ್ಚಿ ಹೋಗಿರುತ್ತದೆ. ಒಂದು ಕಾಲುವೆಯು ಆಂಧ್ರ ಪ್ರದೇಶದಲ್ಲಿ ಬರುತ್ತದೆ. ಹೊಸಪೇಟೆ ತಾಲ್ಲೂಕಿನ ವಿಜಯನಗರ ಮತ ಕ್ಷೇತ್ರ ವ್ಯಾಪ್ತಿಯಲ್ಲಿ 5 ವಿಜಯನಗರ ಕಾಲುವೆಗಳು ಮಾತ್ರ ಬರುತ್ತವೆ.

ಕಾಲುವೆಯ ಒಳಭಾಗಗಳು ಕಲ್ಲುಗೋಡೆ (Masonary) ಮತ್ತು ಸುಣ್ಣ ಮಿಶ್ರಿತ ಮಣ್ಣಿನಿಂದ ಕೂಡಿದ್ದು, ಇದರಿಂದ ರೈತರ ಜಮೀನುಗಳಿಗೆ ನೀರು ಮಂದಗತಿಯಿಂದ ಹರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ವಿಜಯನಗರ ಕಾಲುವೆಗಳ ಆಧುನೀಕರಣದ ಯೋಜನಾ ವರದಿಯ `255.00 ಕೋಟಿಗಳ ಪ್ರಸ್ತಾವನೆಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಯೋಜನಾ ವರದಿಯನ್ನು ಕೇಂದ್ರ ಜಲಆಯೋಗ, ನವದೆಹಲಿ ಇವರಿಗೆ ಸಲ್ಲಿಸಲಾಗಿದ್ದು, ತೀರುವಳಿ ಪಡೆಯಲು ಅಗತ್ಯ ಕ್ರಮ ಜರುಗಿಸಲಾಗಿದೆ.

ಇ) ವಿಜಯನಗರ ಕಾಲುವೆಗಳ ಆಧುನೀಕರಣದ ಯೋಜನಾ ವರದಿಗೆ ಕೇಂದ್ರ ಜಲ ಆಯೋಗದ ತೀರುವಳಿ ಪಡೆದ ನಂತರ ಕಾಮಗಾರಿ ಗಳನ್ನು ಅನುಷ್ಠಾನಗೊಳಿಸಲಾಗುವುದು. ಪ್ರಸಕ್ತ ಸಾಲಿನಲ್ಲಿ ವಿಜಯನಗರ ಕಾಲುವೆಗಳ ಆಧುನೀಕರಣ ಕಾಮಗಾರಿಗಾಗಿ ` 5.00 ಕೋಟಿಗಳ ಅನು ದಾನವನ್ನು ಕರ್ನಾಟಕ ನೀರಾವರಿ ನಿಗಮದಿಂದ ಒದಗಿಸಿ ಕಾಮಗಾರಿ ಗಳನ್ನು ಕೈಗೊಳ್ಳಲಾಗುವುದು.

ಶ್ರೀ ಆನಂದ್ ಸಿಂಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ವನ್ನು ಒದಗಿಸಿದ್ದಾರೆ. ವಿಜಯನಗರ ಕಾಲದಲ್ಲಿ ಮಾಡಿರುವ ಕಾಲುವೆಗಳು ಇವತ್ತು ಮೋರಿಗಳಾಗಿವೆ. ಇಲ್ಲಿನ ರೈತರು ನೀರಿಗಾಗಿ ಎಷ್ಟು ಪರದಾಡು ತ್ತಿದ್ದಾರೆಂದರೆ ENDಗೆ ನೀರು ಹೋಗುತ್ತಿಲ್ಲ. ಕನಿಷ್ಠ ಮೂರು ವರ್ಷಗಳಿಂದ ಕಾಲುವೆಗಳ ಕಾಮಗಾರಿ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಹಣ ಕೂಡ ಬಿಡುಗಡೆ ಮಾಡುತ್ತಿಲ್ಲ. 2011–12,2012–13,2013–14 ನೇ ಸಾಲಿನಲ್ಲಿ ಕೇವಲ

ಒಂದೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಪ್ರತಿ ವರ್ಷ ದುರಸ್ತಿ ಮಾಡಿ ಕಾಲುವೆಗಳನ್ನು ಸರಿಪಡಿಸಬೇಕಾದ ಪ್ರಸ್ತಾವನೆ ಕೇಂದ್ರ ಸರ್ಕಾರದಲ್ಲಿದ್ದು, ಇನ್ನೂ ಹಣ ಬಂದಿಲ್ಲವೆಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಆದಷ್ಟು ಬೇಗ ಕಾಲುವೆಗಳನ್ನು ಸರಿಪಡಿಸುತ್ತಾರೆಂದು ಉತ್ತರ ಕೊಡಿ.

ಶ್ರೀ ಎಂ.ಬಿ.ಪಾಟೀಲ: ಮಾನ್ಯ ಅಧ್ಯಕ್ಷರೆ, 16 ವಿಜಯ ನಗರ ಕಾಲುವೆಗಳ ಆಧುನಿಕರಣದ ಯೋಜನಾ ವರದಿಯ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ಕೊಟ್ಟಿದ್ದೇವೆ. ಸದರಿ ಯೋಜನಾ ವರದಿ ಕೇಂದ್ರ ಜಲ ಆಯೋಗದ(CWC) ಮುಂದಿದೆ. ಅದನ್ನು ನಾವು continuous ಆಗಿ ಕೂಡ pursue ಮಾಡುತ್ತಿದ್ದೇವೆ. permission ಬಂದ ತಕ್ಷಣ ಅಗತ್ಯ ಕ್ರಮವನ್ನು ಕೈಗೊಳ್ಳುತ್ತೇವೆ. ಈ ವರ್ಷ ನಾವು ಐದು ಕೋಟಿ ರೂಪಾಯಿಗಳ ಅನುದಾನ್ನು ಒದಗಿಸಿದ್ದು, ಅವಶ್ಯಕತೆಗನುಗುಣವಾಗಿ ಇವತ್ತಿನ ದಿವಸ ಕಾಮಗಾರಿಗಳನ್ನು ಕೈಗೊಳ್ಳುತ್ತೇವೆ.

ಶ್ರೀ ಆನಂದ ಸಿಂಗ್: ಮಾನ್ಯ ಸಚಿವರು ಕೊಟ್ಟಿರುವ ಉತ್ತರವನ್ನು ಖಂಡಿತವಾಗಿ ಸ್ವಾಗತ ಮಾಡುತ್ತೇವೆ. ಏಕೆಂದರೆ ಹಿಂದಿನ ಸರ್ಕಾರದಿಂದ ಈ ಅನಿಮೋದನೆ ಕೇಂದ್ರ ಸರ್ಕಾರಕ್ಕೆ ಹೋಗಿದೆ, ಆದರೆ ಅದು ಬರುವವರೆಗೆ ಪ್ರತಿ ವರ್ಷ ಒಂದು ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡುತ್ತಿದ್ದಾರೆ, ಅದು ಸಂಬಳಕ್ಕೆ ಹೋಗುತ್ತದೆ. ಈ ಕಾರಣಕ್ಕಾಗಿ Maintenance ಮಾಡುವುದಕ್ಕಾಗಲಿ ಅಥವಾ ಹೂಳು ತೆಗೆಯುವುದಕ್ಕಾಗಲಿ ಆಗುತ್ತಿಲ್ಲ.

ಅಧ್ಯಕ್ಷರು: ಈಗ ಏನು ಆಗಬೇಕೆಂದು ಹೇಳಿ.

ಶ್ರೀ ಆನಂದ ಸಿಂಗ್: ಹೂಳನ್ನು ತೆಗೆಯುವುದಕ್ಕೆ ಮತ್ತು ಜಂಗಲ್ ಕಟಿಂಗ್ ಮಾಡುವುದಕ್ಕೆ ಏನು ಹಣ ಬಿಡುಗಡೆ ಮಾಡುತ್ತಿಲ್ಲ. ಮೂರು ವರ್ಷಗಳಿಂದ ಪ್ರತಿ ವರ್ಷ 36 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೆಚ್ಚಿನ ಹಣ ಬಿಡುಗಡೆ ಮಾಡಿದರೆ ಕೇಂದ್ರ ಸರ್ಕಾರದಿಂದ ಬರುವವರೆಗೆ ಹೂಳು ತೆಗೆಯುವುದಕ್ಕೆ ಹಣ ನೀಡಬೇಕಾಗುತ್ತದೆ.

ಶ್ರೀ ಎಂ.ಬಿ.ಪಾಟೀಲ: ಈ ವರ್ಷ ಐದು ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಿದ್ದೇವೆ. ಸದಸ್ಯರ ಜೊತೆ ಚರ್ಚೆ ಮಾಡಿ which is vulnerable ಅವನ್ನು ತೆಗೆದುಕೊಳ್ಳತ್ತೇವೆ.

ಶ್ರೀ ಕೆ.ಬಿ.ಪ್ರಸನ್ನ ಕುಮಾರ್ : ಮಾನ್ಯ ಅಧ್ಯಕ್ಷರೆ, ಅದಕ್ಕೆ ಸಂಬಂಧ ಪಟ್ಟಂತೆ ಶಿವಮೊಗ್ಗ ಗಾಜನೂರಿನಿಂದ ನೀರು ಬರುವ ವಿಚಾರ.

ಅಧ್ಯಕ್ಷರು: ಅದು ಬರುವುದಿಲ್ಲ. ಮಾನ್ಯ, ವಿಶ್ವನಾಥ್ ಪಾಟೀಲ್. ಇಲ್ಲ. ಮಾನ್ಯ ಸಿ.ಎನ್.ಬಾಲಕೃಷ್ಣ. ಇಲ್ಲ. ಮಾನ್ಯ ತನ್ವೀರ್ ಸೇಠ್.

ಪ್ರಶ್ನೆ ಸಂಖ್ಯೆ: 157(2231)

ಅಧ್ಯಕ್ಷರು: ಮಾನ್ಯ ತನ್ವೀರ್ ಸೇಠ್ ರವರೆ, ಈ ಪ್ರಶ್ನೆಗೆ ಸಂಬಂಧಿಸಿದಂತೆ ಉತ್ತರ ಹೇಳುವುದಕ್ಕೆ 15 ದಿವಸಗಳ ಕಾಲಾವಕಾಶ ಕೇಳಿದ್ದಾರೆ.

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಪ್ರತಿ ಸದನದಲ್ಲೂ ನಾನೂ ಕಾರ್ಮಿಕ ಇಲಾಖೆಗೆ ಸಂಬಂಧಪಟ್ಟ ಹಾಗೆ ಅನೇಕ ಅವ್ಯವಹಾರಗಳು ಸಡೆದಿರುವ ಬಗ್ಗೆ, ಈ ಸರ್ಕಾರದಲ್ಲಿ ನಡೆದಿದೆ ಅಥವಾ ಇಲ್ಲವೆಂದು ನಾನು ಹೇಳತ್ತಿಲ್ಲ. ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಇದರ ಬಗ್ಗೆ ಒಬ್ಬರು ನಿವೃತ್ತ ನ್ಯಾಯಾಧೀಶರು ತನಿಖೆ ನಡೆಸಬೇಕೆಂದು ಆದೇಶವಾಗಿದ್ದರೂ, ಸಚಿವರ ಆದೇಶ ಮೇರೆಗೆ ಅದನ್ನು ರದ್ದುಗೊಳಿಸಲಾಗಿರುತ್ತದೆ. ಇದು ಸುಮಾರು ಒಂದೂವರೆ ಲಕ್ಷ ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆಯಾಗಿದೆ.

ಅಧ್ಯಕ್ಷರು: ಮಾನ್ಯ ತನ್ವೀರ್ ಸೇಠ್ ರವರೆ, ಅವರು ಉತ್ತರ ಕೊಡದೇ ಚರ್ಚೆ ಮಾಡುವುದರಿಂದ ಏನು ಪ್ರಯೋಜನ?

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಇವತ್ತು ನಾನು ಕೇಳಿರುವಂಥ ಪ್ರಶ್ನೆ ಎಂದರೆ, ಇವತ್ತು ಏನು ಸುಮಾರು 90 ಲಕ್ಷ ಅಸಂಘಟಿತ ಕಾರ್ಮಿಕರಿದ್ದಾರೆ, ಅವರ ವಿಚಾರ.

ಅಧ್ಯಕ್ಷರು: ತಾವು ಹೇಳುವುದು ಸರಿಯಾಗಿದೆ. Details ಬೇಡ. ನಿಮ್ಮ ಪ್ರಶ್ನೆಗೆ ಉತ್ತರವನ್ನು ಮುಂದಿನ ವಾರ ಖಂಡಿತ ತರಿಸಿಕೊಡುತ್ತೇನೆ.

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಇದಕ್ಕೆ ಉತ್ತರ ಖಂಡಿತ ಬರುವುದಿಲ್ಲ. ನಾನು ಈಗಾಗಲೇ ಅಧಿಕಾರಗಳೊಂದಿಗೆ ಮಾತನಾಡಿದ್ದೇನೆ. ಆ ಅಧಿಕಾರಿಗಳು ವಿವರ ಸುಮಾರು 2 ಲಕ್ಷ ಪುಟಗಳು ಬರುತ್ತದೆ. ಕೊಡುವು ದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಒಂದು ಸದನ ಸಮಿತಿಯನ್ನು ರೂಪಿಸಿ. ಮಾನ್ಯ ಮುಖ್ಯಮಂತ್ರಿಗಳಿದ್ದಾರೆ.

ಅಧಕ್ಷರು: ಯಾವ ವಿಚಾರದಲ್ಲಿ? ಅವರು ಉತ್ತರವನ್ನೇ ಕೊಡದೆ ನಾನು ಹೇಗೆ ಹೇಳುವುದಕ್ಕೆ ಆಗುತ್ತದೆ?

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಈ ಇಲಾಖೆ ಬಹಳ ಜವಾಬ್ದಾರಿಯುತವಾಗಿ ಕೆಲಸ ಮಾಡ ಬೇಕಾಗಿರುವ ಇಲಾಖೆಯಾಗಿದೆ. ಈ ಹಿಂದೆ ಮಾನ್ಯ ಮ್ಯುಖಮಂತ್ರಿಗಳೇ ನಿರ್ವಹಿಸಿತ್ತಿದ್ದಂಥ ಖಾತೆ ಇವತ್ತು ರಾಜ್ಯ ಸಚಿವ ಮಟ್ಟಕ್ಕೆ ಬಂದಿದೆ. ಸುಮಾರು ಕೋಟ್ಯಂತರ ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆಯಾಗಿರುವುದರಿಂದ ಒಂದು ಸದನ ಸಮಿತಿಯನ್ನು ರೂಪಿಸಿ, ನಾನಾ ರೀತಿಯ ವಿಚಾರಗಳು ಇದರಲ್ಲಿದೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳೆ, ತಾವು ಇದಕ್ಕೆ ಏನು ಹೇಳು ತ್ತೀರಿ?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ್: ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರಾಗಿರತಕ್ಕಂಥ ಮಾನ್ಯ ತನ್ವೀರ್ ಸೇಠರವರು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರವನ್ನು ಕೊಡದೇ ಸಬೂಬು ಹೇಳುವಂಥ ವಿಚಾರ ನಮ್ಮ ಮುಂದೆ ಇಲ್ಲ. ಅವರ ಪ್ರಶ್ನೆಗೆ 2 ಲಕ್ಷದ 75 ಸಾವಿರ ಪುಟಗಳನ್ನು ನಾವು ತಯಾರು ಮಾಡ ಬೇಕಾಗಿದೆ. ಅದಕೋಸ್ಕರ ಸಮಯಾವಕಾಶವನ್ನು ಕೇಳುತ್ತಿದ್ದೇವೆ ವಿನಃ ಬೇರೆ ಯಾವುದೇ ಉದ್ದೇಶದಿಂದ ಇಲ್ಲ. ಮಾನ್ಯ ಸದಸ್ಯರು ಹಿಂದೆ ಕಾರ್ಮಿಕ ಇಲಾಖೆಯ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಸಾಕಷ್ಟು ಅನುಭವ ವಿದೆ. ಅವರೊಂದಿಗೆ ನಾನು ಪ್ರತ್ಯೇಕವಾದದಂಥ ಸಭೆಯನ್ನು ಏರ್ಪಾಡು

ಮಾಡಿ, ಅವರ ಸಲಹೆಗಳನ್ನು ತೆಗೆದುಕೊಂಡು ಇದರ ಬಗ್ಗೆ ಚರ್ಚೆ ಮಾಡುತ್ತೇನೆ.

ಅಧ್ಯಕ್ಷರು : ಆಯಿತು, ಮಾಡಿ.

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲೂ 15 ದಿವಸಗಳ ಒಳಗಾಗಿ ನನ್ನನ್ನು ಕರೆದು ಮಾತನಾಡುತ್ತೇವೆ ಎಂದು ಹೇಳಿದ್ದರು. ನನ್ನ ಜೊತೆ ಮಾತ ನಾಡುವುದರಿಂದ ಏನೂ ಆಗುವುದಿಲ್ಲ.

ಅಧ್ಯಕ್ಷರು: ನಿಮ್ಮ ಉದ್ದೇಶವೇನು?

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಇದು ಸರ್ಕಾರದ ಇಲಾಖೆ ಯಾಗಿದೆ. ಇಲ್ಲಿ ಹಿಂದಿನ ಅವಧಿಯಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿದೆ. ನಾನು ಈ ಸರ್ಕಾರದಲ್ಲಿ ನಡೆದಿದೆ ಎಂದು ಹೇಳುತ್ತಿಲ್ಲ.

ಅಧ್ಯಕ್ಷರು: ಮಾನ್ಯ ಸಚಿವರೆ, ತಾವು ಒಂದು ಕೆಲಸ ಮಾಡಿ. ಅವರ ಪ್ರಶ್ನೆಗಳನ್ನು ಸ್ವಲ್ಪ ಸಂಕ್ಷಿಪ್ತ ಮಾಡಿಕೊಂಡು ಎಷ್ಟು ಅಗತ್ಯ ಬೇಕೋ ಅಷ್ಟು ಪ್ರಶ್ನೆಗಳಿಗೆ ಉತ್ತರವನ್ನು ಮುಂದಿನ ವಾರ ಕೊಡಿ.

ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ್: ಅಧ್ಯಕ್ಷರೆ, ಪ್ರಯತ್ನ ಮಾಡುತ್ತೇನೆ.

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಈ ಕಾಯಕ್ರಮದ ಬಗ್ಗೆ ನಾನು ಏನು ಕೇಳುತ್ತಿದ್ದೇನೆಂದರೆ, ಅಸಂಘಟಿತ ವಲಯದ ಮಕ್ಕಳು ಯಾರು ಶಾಲೆ ಬಿಟ್ಟಿರುತ್ತಾರೆ ಅವರಿಗೆ ತರಬೇತಿ ಕೊಡುವಂಥದ್ದಾಗಿದೆ. ಅವರಿಗೆ ತರಬೇತಿಯನ್ನು ಕೊಡಬೇಕಾದರೆ, ಪ್ರಮಾಣ ಪತ್ರ ನೀಡಬೇಕಾದರೆ ಒಂದು assessing team ಎಂದು ಮಾಡಲಾಗುತ್ತದೆ.

ಅಧ್ಯಕ್ಷರು: ನೀವು ಕೇಳುವ ಪ್ರಶ್ನೆಗೆ ಅವರು ಉತ್ತರ ಕೊಟ್ಟರೆ ಮುಂದೆ ಪ್ರಶ್ನೆ ಬರುವುದಿಲ್ಲ.

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಇದಕ್ಕೆ ಒಂದು ಸದನ ಸಮಿತಿಯನ್ನು ರೂಪಿಸಿದರೆ ಒಳ್ಳೆಯದು.

ಅಧ್ಯಕ್ಷರು: ಈ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಇಲಾಖೆಯನ್ನು ಸುಧಾರಣೆ ಮಾಡೋಣವೆಂದು ಹೊರತು ಬೇರೆ ಯಾರ ಮೇಲೂ ಆರೋಪ ಮಾಡುವ ಉದ್ದೇಶವಿಲ್ಲ.

ಅಧ್ಯಕ್ಷರು: ಮಾನ್ಯ ತನ್ವೀರ್ ಸೇಠ್‌ರವರೆ, ಹಾಗೆ ಇದ್ದರೆ ಮುಂದೆ ಕಾರ್ಮಿಕ ಇಲಾಖೆಯ ಬಗ್ಗೆ ಚರ್ಚೆ ಬರುತ್ತದೆ. ಆಗ ವಿಶೇಷವಾಗಿ ಚರ್ಚೆ ಮಾಡಿರಿ.

ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ್: ಅಧ್ಯಕ್ಷರೆ ಸನ್ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಒಂದು ವಾರದೊಳಗೆ ನಾನು ಅವರೊಂದಿಗೆ ಹಾಗೂ ನಮ್ಮ ಇಲಾಖೆಯ ಅಧಿಕಾರಿಗಳೊಡನೆ ಚರ್ಚೆಯನ್ನು ಮಾಡಿ, ತಮಗೆ ಉತ್ತರ ವನ್ನು ಕೊಡತಕ್ಕಂಥ ಕೆಲಸವನ್ನು ಮಾಡುತ್ತೇನೆ. ನಮಗೆ ಒಂದು ವಾರ ಕಾಲಾವಕಾಶ ಕೊಡಿ.

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಇಲ್ಲಿ ಕೆಲವೊಂದು ಅಧಿಕಾರಿಗಳನ್ನು ಉಳಿಸುವ ಹಾಗೂ ರಕ್ಷಣೆ ಕೊಡುವ ಕೆಲಸ ಆಗುತ್ತಿದೆ.

ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ್: ಅಧ್ಯಕ್ಷರೆ, ನಾನು ಮಾನ್ಯ ತನ್ವೀರ್ ಸೇಠ್ ಹಾಗೂ ಅಧಿಕಾರಿಗಳೊಂದಿಗೆ ಚರ್ಚೆ ಮಾಡುತ್ತೇನೆ.

ಅಧ್ಯಕ್ಷರು: ಆಯಿತು.